**<u>ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ  ನ್ಯಾಯಾಲಯ ಕುಂದಗೋಳ</u>**

**<u>ಓ ಎಸ್ ನಂಃ 27/2022</u>**

**<u>ಡಿ ಡಬ್ಲ್ಯೂ/1</u>**

**<u>ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತುಃ ದಿಃ  09.12.2025</u>**

**<u>ಮುಂ.ಪಾಟೀ ಸವಾಲುಃ ಶ್ರೀ ಯ್ಯೂ ಎಮ್ ಪಿ ವಕೀಲರಿಂದ ವಾದಿ ಪರ ವಕೀಲರುಃ</u>**

3. ಬೆಟ್ಟದೂರು ಗ್ರಾಮದ ನಿಂಗಪ್ಪ ಹಾದಿಮನಿ ನನಗೆ ಗೊತ್ತು. ಅವರ ಮನೆ ನಂಬರ ನನಗೆ ಗೊತ್ತಿಲ್ಲ. ನನ್ನ ತಕರಾರಿನಲ್ಲಿ ನಿಂಗಪ್ಪ ಹಾದಿಮನಿ ಇವರ ಮನೆ ನಂಬರ ಹೇಳಿ ಬರೆಸಿರುವುದಿಲ್ಲ. ಗ್ರಾಮ ಪಂಚಾಯತ ನಂಃ339 ಇದು ಮೋದಿನಸಾಬ ದರ್ಗಾ ಇವರಿಗೆ ಸಂಬಂಧಪಟ್ಟಿದ್ದು. ಮೋದಿನಸಾಬ ಬಾಬಾಜಾನ ದರ್ಗಾ ಇವರು ವಾದಿಯ ತಂದೆ. ವಾದಿಯರ ಮನೆತನಕ್ಕೆ ಆಸ್ತಿಗಳು ಹಾಗೂ ದಾವಾ ಆಸ್ತಿಗಳು ಒಂದುಕ್ಕೊಂದು ಹತ್ತಿ ಇವೆಯಾ ಎಂದರೆ ಸಾಕ್ಷಿ ವಿಪಿಸಿ ನಂಃ337 ರಿಂದ 339 ವರೆಗೆ ಒಂದುಕ್ಕೊಂದು ಹತ್ತಿ ಇವೆ, ಅದರೊಳಗೆ ದಾವಾ ಆಸ್ತಿ ಸಹ ಒಂದಾಗಿರುತ್ತದೆ ಎಂದು ನುಡಿಯುತ್ತಾರೆ.

4. ದಾವಾ ಆಸ್ತಿ ನಂಃ16/1 ಕ್ಷೇತ್ರ 1 ಗುಂಟೆ 6 ಆಣೆ ಎಂದರೆ ಸರಿ. ಈ ಆಸ್ತಿಯಲ್ಲಿ ನನಗೆ ಹಕ್ಕು ಇರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿಗೆ ಹತ್ತಿ ನನಗೆ ಸೇರಿದ ಆಸ್ತಿ ನಂಃ336 ದಕ್ಷಿಣದ ಕಡೆಗೆ ಇದೆ. ಆಸ್ತಿ ನಂಃ336 ಸಂಪೂರ್ಣವಾಗಿ ನನ್ನ ಹೆಸರಿನಲ್ಲಿ ಇದೆ. ನನ್ನ ಆಸ್ತಿ ನಂಃ336 ಕ್ಕೆ ಹತ್ತಿಕೊಂಡು ವಾದಿ ಮತ್ತು ಅವರ ತಂದೆಗೆ ಸಂಬಂದಪಟ್ಟ ಆಸ್ತಿಗಳು ಉತ್ತರಕ್ಕೆ ಮತ್ತು ಪಶ್ಚಿಮ ದಿಕ್ಕಿನ ಕಡೆಗೆ ಹತ್ತಿಕೊಂಡು ಇವೆ ಎಂದು ನುಡಿಯುತ್ತಾರೆ. ನನ್ನ ತಕರಾರಿನಲ್ಲಿ ನಾನು ನಕ್ಷೆಯಲ್ಲಿ ತೋರಿಸಿದ ಚಕ್ಕುಬಂದಿ ತಪ್ಪು ಇರುತ್ತದೆ ಎಂದರೆ ಸರಿಯಲ್ಲ.

5. ದಾವಾ ಆಸ್ತಿ ನಂಃ16/1 ಕ್ಕೆ  ಪಶ್ಚಿಮ ದಿಕ್ಕಿನ ಕಡೆಗೆ ರಸ್ತೆ ಇದೆ. ದಾವಾ ಆಸ್ತಿ ಪೂರ್ವಕ್ಕೆ ಆಸ್ತಿ ನಂಃ16/2 ಇದೆ, ಉತ್ತರಕ್ಕೆ ಯಲ್ಲಪ್ಪ ಹಾದಿಮನಿ ಇವರ ಖುಲ್ಲಾ ಜಾಗೆ ಇದೆ ಹಾಗೂ ದಕ್ಷಿಣಕ್ಕೆ ಆಸ್ತಿ ನಂಃ336/ಎ ಇದ್ದು ಅದು ನಮಗೆ ಸೇರಿದ್ದು. ದಾವಾ ಆಸ್ತಿ ಚಕ್ಕುಬಂದಿ ಈ ರೀತಿ ಇದೆ ಅಂತ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

6. ದಾವಾ ಆಸ್ತಿ ಪೂರ್ವಕ್ಕೆ ಪ್ಲಾಟಿನ ದಾರಿ ಇದೆ ಎಂದರೆ ಸರಿಯಲ್ಲ. ಪಶ್ಚಿಮಕ್ಕೆ ರಿ.ಸ.ನಂಃ339 ಆಸ್ತಿ ಎಂದರೆ ಸರಿಯಲ್ಲ. ಉತ್ತರಕ್ಕೆ ಆಸ್ತಿ ನಂಃ16/2 ಆಸ್ತಿ ಇದೆ ಎಂದರೆ ಸರಿಯಲ್ಲ ಹಾಗೂ ದಕ್ಷಿಣಕ್ಕೆ ರಿ.ಸ.ನಂಃ337 ಇದೆ ಎಂದರೆ ಸರಿಯಲ್ಲ.

7. ದಾವಾ ಆಸ್ತಿ ನಂಃ16/1 ಒಟ್ಟಾರೆ ಆಗಿರುತ್ತದೆ. ದಾವಾ ಆಸ್ತಿ ವಾದಿ ಮತ್ತು ಅವರ ಅಣ್ಣತಮ್ಮಂದಿರಿಗೆ ಸಂಬಂದಪಟ್ಟಿದ್ದು ಎಂದರೆ ಸರಿ. ನಾನು ದಿಃ02.02.2022 ರಂದು ದಾವಾ ಆಸ್ತಿಯಲ್ಲಿ ಕಟ್ಟಡ ಕಟ್ಟಿಸಲು ಪ್ರಯತ್ನಿಸಿದೆ ಎಂದರೆ ಸರಿಯಲ್ಲ. ಆ ರೀತಿ ನಾನು ವಾದಿಯರ ದಾವಾ ಆಸ್ತಿಯ ಕಬ್ಜಾವಹಿವಾಟಕ್ಕೆ ತೊಂದರೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆ ರೀತಿ ಮಾಡಿದ್ದರು ಸಹ ಸುಳ್ಳು ತಕರಾರನ್ನು ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಸಾಕ್ಷಿಯ ಸಂಪೂರ್ಣ ಪಾಟೀ ಸವಾಲು ಮಾಡಿರುತ್ತಾರೆ.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೆ ಸರಿ ಇದೆ.**

**ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂ.ಗಳು**
**ಕುಂದಗೋಳ.**